ಶ್ರೀ ಎಂ. ಎಸ್. ಕೃಷ್ಣನ್.— ಪೋಲೀಸ್ ವರ್ಷನ್ ಅನ್ನು ಮಾನ್ಯ ಮಂತ್ರಿಗಳಾದ ಜಿಗಜಿಣಗಿ ಯವರು ಹೇಳಿದ್ದಾರೆ. It is nothing to do with the facts. It is a baseless and false statment.

ತಪ್ಪು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾನು ಉಪಪ್ರಶ್ನೆ ಕೇಳಿದರೆ ಮತ್ತೆ ಪೋಲೀಸ್ ವರ್ಷನ್ ಉತ್ತರವನ್ನೇ ಹೇಳುತ್ತಾರೆ. ಮಾನ್ಯ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಪೋಲೀಸರು ಕಳುಹಿಸಿದ ವರದಿಯನ್ನು ಹೇಳಿದರೆ ಏನು ಪ್ರಯೋಜನ ? ಬಂದಿಲ್ಲ, ಬಂದಿಲ್ಲ ಎಂದು ಉತ್ತರ ಹೇಳುತ್ತಾರೆ. ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ತಾವು ಈ ವಿಷಯದಲ್ಲಿ ಮತ್ತೆ ವಿಚಾರಣೆ ನಡೆಸಿ ಪೋಲೀಸರು ಕಾರ್ಮಿಕರಿಗೆ ಮೋಸ ಮಾಡಿದ್ದಾರೆ ಎಂಬ ಬಗ್ಗೆ ಪೂರ್ತಿ ವಿವರಗಳನ್ನು ಅಲ್ಲಿನ ಜನರಿಂದ ಮತ್ತೆ ತರರಿಂದ ತರಿಸಿಕೊಂಡು ಸರಿಯಾದ ಉತ್ತರವನ್ನು ಕೊಡಬೇಕು.

ಶ್ರೀ ರಮೇಶ್ ಜಿಗಜಿಣಗಿ.— ನಾನು ಮತ್ತೆ ಅಧಿಕಾರಿಗಳನ್ನು ಕಳುಹಿಸಿ ವರದಿ ತರಿಸಿ ಇನ್ನೊಂದು ಸಾರಿ ಉತ್ತರ ಕೊಡುತ್ತೇನೆ.

ಶ್ರೀ ಪಂಪಾಪತಿ.— ಎಸ್ಟೇಟಿನವರು ಕಾರ್ಮಿಕರಿಗೆ ಹೊಡೆದಿದ್ದಾರೆ. ಆದರೆ ಅದನ್ನು ಬದಲಾಯಿಸಿ ಪೋಲೀಸರಿಗೇ ಕಾರ್ಮಿಕರು ಹೊಡೆದರು ಎಂದು ಹೇಳಿದ್ದಾರೆ. ಕಾರ್ಮಿಕರು ಪೋಲೀಸರಿಗೆ ಹೊಡೆಯುವುದಕ್ಕಾಗುವುದಿಲ್ಲ. ಏಕೆಂದರೆ ಎಸ್ಟೇಟಿನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಪೋಲೀಸರಿಗೆ ಹೊಡೆಯುವಷ್ಟು ಶಕ್ತಿ ಇರುವುದಿಲ್ಲ. ಹೊಟ್ಟೆಬಟ್ಟೆಗಾಗಿ ಅವರು ದುಡಿಯುವುದಕ್ಕೆ ಬಂದಿರುತ್ತಾರೆ ಕೂಲಿ ಕೇಳುವುದಕ್ಕೆ ಸಂಘಟನೆ ಮಾಡಿಕೊಂಡರೆ ಗೂಂಡಾಗಳನ್ನು ಕರೆಸಿ ಪೋಲೀಸರ ಎದುರಿಗೆ ಹೊಡಿಸಿ ಕಾರ್ಮಿಕರೇ ಹೊಡೆದರು ಎಂದು ಕೇಸ್ ದಾಖಲು ಮಾಡಿದ್ದಾರೆ. ಕಾರ್ಮಿಕರು ಹೊಡೆತಕ್ಕೆ ಹೆದರಿ ಶಿಂಗಳಂಗಟ್ಟಿಲೆ ಆಡಿಯಲ್ಲಿ ತಲೆಮರೆಸಿಕೊಂಡು ಹಿರುಗಾಡಿದ್ದಾರೆ. ಒಂದು ತಿಂಗಳ ನಂತರ ವಾಪಸ್ ಬಂದಿದ್ದಾರೆ. ಆ ವರದಿ ಇಲ್ಲಿಲ್ಲ, ಪೋಲೀಸರು ತಮಗೆ ಸರಿಯಾದ ವರದಿಯನ್ನು ಕಳುಹಿಸಿಲ್ಲ. ಆದ್ದರಿಂದ ಪೋಲೀಸರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ.

ಅಧ್ಯಕ್ಷರು.— ಮತ್ತೆ ವರದಿ ತರಿಸಿ ಹೇಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಪಂಪಾಪತಿ.— ಸದನಕ್ಕೆ ಸಂಬಂಧ ವರದಿ ಕೊಟ್ಟರೆ ಏನು ಪ್ರಯೋಜನ ?

ಶ್ರೀ ಎಂ. ಎಸ್. ಕೃಷ್ಣನ್.— ನಾನೇ ಸ್ಥಳಕ್ಕೆ ಹೋಗಿದ್ದೆ, ನನ್ನ ಮೇಲೂ ಹಲ್ಲೆ ಮಾಡುವ ಪರಿಸ್ಥಿತಿ ಇತ್ತು. ನಾನು ಹೇಗೋ ಬಚಾವ್ ಆದೆ. ನಾನು ಹೋಗಿದ್ದ ಬಗ್ಗೆ ಪೋಲೀಸರು ವರದಿ ಕೊಟ್ಟಿದ್ದಾರಾ ? ಎಂ. ಎಲ್.ಎ. ಆಗಿ ಈ ತರಹ ಕಾರ್ಮಿಕರ ಮೇಲೆ ದಾಳಿ ನಡೆದಿದೆ ಎಂದು ಗೊತ್ತಾದಾಗ ನಾನೇ ಪರಿಶೀಲನೆ ಮಾಡುವುದಕ್ಕೆ ಹೋಗಿದ್ದೆ. ಆದರ ಬಗ್ಗೆ ಪೋಲೀಸರಿಂದ ವರದಿ ಬಂದಿದೆಯೇ ? ನಮ್ಮ ಮೇಲೆ ದಾಳಿ ಮಾಡಿದರೆಲ್ಲ ಅದರ ಬಗ್ಗೆ ವರದಿ ಬಂದಿದೆಯೆ ?

ಶ್ರೀ ರಮೇಶ್ ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಕೃಷ್ಣನ್ ಅವರು ಮತ್ತು ಪಂಪಾಪತಿಯವರ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇನ್ನೊಂದು ಸಾರಿ ಇದರ ಬಗ್ಗೆ ರಿಪೋರ್ಟ್ ತರಿಸಿ ಉತ್ತರ ಕೊಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ತುಂಡಿನಶಿವರೆ ಅರಣ್ಯಕ ಠಾಣೆ ವ್ಯಾಪ್ತಿಗೊಳಪಡುವ ಅಜ್ಜನಹಳ್ಳಿ ಹಾಗೂ ಮುಂಗಳೂರು ಗ್ರಾಮದ ಪುಂಡಾಟಿಕೆಗಳು.

೦೭೫೯. ಶ್ರೀ ಬಿ. ಬೈರವ್ವಾಜಿ (ತುರುವೆಕೆರೆ). — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಒಳಾಡಳಿತ ಹಾಗೂ ರಾಷ್ಟ್ರೀಯ ಉಳಿತಾಯ ಯೋಜನಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ತುರುವೆಕೆರೆ ತಾಲ್ಲೂಕಿನ ಮುಂಗಳೂರು ಪಂಚಾಯ್ತಿ ಹಾಗೂ ಅಜ್ಜನಹಳ್ಳಿ ಪಂಚಾಯ್ತಿಗೆ ಸೇರಿದ ಹಳ್ಳಿಗಳು ತುರುವೆಕೆರೆ ಅರಣ್ಯಕ ಉಪ ನಿರೀಕ್ಷಕರ ಠಾಣೆ ವ್ಯಾಪ್ತಿಗೆಹತ್ತಿರವಿದ್ದರೂ ಅಪರಾಧಗಳನ್ನು ದೂರದ ದಂಡಿನ ಶಿವಾರ ಅರಣ್ಯಕ ಠಾಣೆ ವ್ಯಾಪ್ತಿಗೆ ಸೇರಿಸಿರುವುದು ನಿಜವಷ್ಟವೇ ?

ಆ) ಅದರಿಂದಾಗಿ ಮೇಲ್ಕಂಡ ಗ್ರಾಮಸ್ಥರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಮೇಲ್ಕಂಡ ಹಳ್ಳಿಗಳನ್ನು ತುರುವೇಕೆರೆ ಆರಕ್ಷಕ ಠಾಣೆಯ ವ್ಯಾಪ್ತಿಗೆ ಸೇರಿಸಬೇಕೆಂದೂ ಮೇಲ್ಕಂಡ ಹಳ್ಳಿಯವರಿಂದ ಹಾಗೂ ಕ್ಷೇತ್ರದ ಶಾಸಕರಿಂದ ಮನವಿ ಬಂದಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಮೇಶ್ ಚಿಗಚಿಣಗಿ.— ರಾಜ್ಯ ಗೃಹಮಂತ್ರಿಯವರು ಈ ಪ್ರಶ್ನೆಯನ್ನು ಉತ್ತರಿಸಂ ವರು.

ಅ) ಮಂಗಳೂರು ಪಂಚಾಯ್ತಿಗೆ ಸೇರಿದ ಎಲ್ಲಾ ಹಳ್ಳಿಗಳು ಮತ್ತು ಅಜ್ಜನಹಳ್ಳಿ ಪಂಚಾಯ್ತಿಗೆ ಸೇರಿದ ಎಲ್ಲಾ ಹಳ್ಳಿಗಳು ದಂಡಿನ ಶಿವಾರ ಆರಕ್ಷಕ ಠಾಣೆಯ ವ್ಯಾಪ್ತಿಯಲ್ಲಿರುವುದು ನಿಜವಲ್ಲ, ಕೇವಲ ಅಜ್ಜನಹಳ್ಳಿ ಮಾತ್ರ ಈಗ ದಂಡಿನ ಶಿವಾರ ಆರಕ್ಷಕ ಠಾಣೆಯ ವ್ಯಾಪ್ತಿಯಲ್ಲಿದೆ.

ಆ) ಈಗಾಗಲೇ ಅಜ್ಜನಹಳ್ಳಿ ಹೊರತಾಗಿ ಬೇರೆ ಎಲ್ಲಾ ಹಳ್ಳಿಗಳೂ ತುರುವೇಕೆರೆ ಆರಕ್ಷಕ ಠಾಣೆಯ ವ್ಯಾಪ್ತಿಗೆ ಸೇರಿಸಲ್ಪಟ್ಟಿರುವ ಕಾರಣ ಈ ಗ್ರಾಮಸ್ಥರಿಗೆ ತೊಂದರೆ ಇಲ್ಲ. ಅಜ್ಜನಹಳ್ಳಿಯ ಗ್ರಾಮಸ್ಥರಿಗೆ ಮಾತ್ರ ಸ್ವಲ್ಪ ತೊಂದರೆ ಇರಬಹುದು.

ಇ) ಈಗಾಗಲೇ ಮೇಲಿ ಪೇಳಿದ ಹಳ್ಳಿಗಳನ್ನು ತುರುವೇಕೆರೆ ಆರಕ್ಷಕ ಠಾಣೆಗೆ ಸೇರಿಸಲಾಗಿದೆ. ಅಜ್ಜನಹಳ್ಳಿಯನ್ನು ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಇಷ್ಟರಲ್ಲೇ ಅಜ್ಜನಹಳ್ಳಿಯನ್ನೂ ಕೂಡ ತುರುವೇಕೆರೆ ಆರಕ್ಷಕ ಠಾಣೆಯ ವ್ಯಾಪ್ತಿಗೆ ಸೇರಿಸುವ ಅಧಿಸೂಚನೆಯನ್ನು ಹೊರಡಿಸಲಾಗುವುದು.

ಶ್ರೀ ರಮೇಶ್ ಚಿಗಚಿಣಗಿ (ಗೃಹಖಾತೆ ರಾಜ್ಯ ಮಂತ್ರಿ).--

ಶ್ರೀ ಬಿ. ಬೈರಪ್ಪಾಜಿ.— ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ಕಳುಹಿಸಿದಾಗ ಮುಂಗಳೂರು ಪಂಚಾಯ್ತಿ ಮಾತ್ರ ಅಜ್ಜನ ಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಎಲ್ಲ ಹಳ್ಳಿಗಳಿಗೂ ಕೂಡ ದೂರದಲ್ಲಿರತಕ್ಕ ದಂಡಿನ ಶಿವಾರ ಪೋಲೀಸ್‌ಠಾಣೆ ವ್ಯಾಪ್ತಿಯಲ್ಲಿ ಸೇರಿತ್ತು. ಇದನ್ನು ಯಾವಾಗ ತುರುವೇಕೆರೆ ವ್ಯಾಪ್ತಿಗೆ ಸೇರಿಸಿದ್ದೀರಿ ಎಂಬ ಬಗ್ಗೆ ತಾರೀಖಿನನ್ನು ಕೊಡಲು ಸಾಧ್ಯವೇ ? ಅಜ್ಜನ ಹಳ್ಳಿಯನ್ನು ಯಾವಾಗ ಸೇರಿಸುತ್ತೀರಿ ?

ಶ್ರೀ ರಮೇಶ್ ಜಿಗಜಿಣಗಿ.— ಸರ್ಕಾರದ ಸೂಚನೆ ಕ್ರಮಾಂಕ ಎಚ್‌ಡಿ ೩೨ ಬಿಬಿಪಿ ೮೩ ದಿನಾಂಕ ೧೪-೧೧-೮೩ರಲ್ಲಿರಲ ಮುಂಗಳೂರು ಪಂಚಾಯಿತಿಯ ಹಳ್ಳಿಗಳನ್ನು ತುರುವೇಕೆರೆ ಪೋಲೀಸ್‌ಠಾಣೆ ವ್ಯಾಪ್ತಿಗೆ ವರ್ಗಾಯಿಸಿದ್ದೇವೆ. ಅಜ್ಜನಹಳ್ಳಿ ಪಂಚಾಯಿತಿಗೆ ಸೇರಿರತಕ್ಕ ಹಳ್ಳಿಯನ್ನು ಪದ್ಮದಲ್ಲಿಯೇ ತೀವ್ರಗತಿಯಿಂದ ತುರುವೇಕೆರೆ ಪೋಲೀಸ್ ಠಾಣೆ ವ್ಯಾಪ್ತಿಗೆ ಸೇರಿಸುತ್ತೇವೆ ಎಂದೂ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

Allotment of rice to mangalore rationing area

1390. SRI. V. DHANANJAYA KUMAR, (Mangalore)—will the Minister for Food & Civil Supplies be pleased to state;

A a) What is the monthwise allotment of rice to Mangalore rationing area, during 1982 and 1983;

b) What is the quantity distributed out of the allotment;

c) Whether the scale of issue of rice per capita and per ration card will be enhanced ?

SRI. G. BASAVANAPPA.— Minister for Food and Civil Supplies

a) Statement enclosed

b) Statsment enclosed

c) -No-